143

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ವಿಧಾನ ಪರಿಷತ್ತ್ ಸದಸ್ಯರು ಇವರ ನಿಯಮ 72ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ**

ಸಾರ್ವಜನಿಕ ಶಿಕ್ಷಣ ಇಲಾಖೆಯ ಡಿ.ಎಸ್.ಇ.ಆರ್.ಟಿ ಕಛೇರಿಯಲ್ಲಿನ ಬಹು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ 24 ಸಿಬ್ಬಂದಿಯವರ (ಹಲವು ನಕಲಿ ಸಹಿಗಳೊಂದಿಗೆ) ಈ ಹಿಂದಿನ ಮಾನ್ಯ ಶಿಕ್ಷಣ ಸಚಿವರಿಗೆ ದಿನಾಂಕ:13.01.2020ರಲ್ಲಿ ಸದರಿ ಕಛೇರಿಯ ಒಬ್ಬ ಪ್ರಥಮ ದರ್ಜೆ ಸಹಾಯಕರ ವಿರುದ್ಧ ದೂರು ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಆಯುಕ್ತರ ಕಛೇರಿಯ ಕಡತ ಸಂಖ್ಯೆ:ಸಿ5(ದೂರು/63/2019-20ರಲ್ಲಿ ವಿಚಾರಣಾಧಿಕಾರಿಗಳನ್ನು ನೇಮಿಸಿ ವಿಚಾರಣೆಯ ವರದಿಯಲ್ಲಿ ಆರೋಪಗಳು ಸಾಬೀತಾಗಿಲ್ಲದ ಕಾರಣ ಹಾಗೂ ಸದರಿ 24 ನೌಕರರ ಸಹಿಗಳಲ್ಲಿ ಹಲವು ನಕಲಿ ಸಹಿಗಳು ಕಂಡುಬಂದ ಕಾರಣದಿಂದ ಮತ್ತು ಸದರಿ ಕಛೇರಿಯ ನಿರ್ದೇಶಕರವರ ವಾಸ್ತವಾಂಶ ವರದಿ ಪ್ರಕಾರ 07.07.2020ರನ್ವಯ ಆರೋಪ ಮುಕ್ತಗೊಳಿಸಿ ಕಡತವನ್ನು ಮುಕ್ತಾಯಗೊಳಿಸಿರುತ್ತಾರೆ. ಈ ಸಂಬಂಧ ಕೆಲವು ಸಿಬ್ಬಂದಿಯವರುಗಳು ಲಿಖಿತ ಹೇಳಿಕೆ ಸಲ್ಲಿಸಿ ದೂರಿನ ಅರ್ಜಿಯಲ್ಲಿನ ಸಹಿಗಳು ನಾವುಗಳು ಮಾಡಿಲ್ಲವೆಂದು ಹೇಳಿರುವುದು ಸಹ ವರದಿಯಲ್ಲಿ ಸ್ಪಷ್ಟವಾಗಿದ್ದರೂ ಸಹ ಆಯುಕ್ತರ ಕಛೇರಿಯ ಕಡತ ನಿರ್ವಹಿಸುತ್ತಿದ್ದ ಸಂಬಂಧಿಸಿದ ಹಿಂದಿನ ಅಧಿಕಾರಿ ಸಿಬ್ಬಂದಿಯವರುಗಳು ಸೇರಿ ನಕಲಿ ಸಹಿಗಳ ಬಗ್ಗೆ ಮರೆಮಾಚಿ ಈ ಬಗ್ಗೆ ಆಯುಕ್ತರು, ಸಾ.ಶಿ.ಇಲಾಖೆ, ರವರ ಗಮನಕ್ಕೆ ವಾಸ್ತವಾಂಶ ಮಂಡಿಸದೆ ನಕಲಿ ಸಹಿ ಮಾಡಿರುವವರನ್ನು ರಕ್ಷಿಸಲು ಕಾರಣ ಕರ್ತರಾಗಿರುತ್ತಾರೆ. ಹಾಗೂ ನಕಲಿ ಸಹಿ ಮಾಡಿರುವವರ ವಿರುದ್ಧ ಯಾವುದೇ ಕ್ರಮವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಈ ಬಗ್ಗೆ ನಕಲಿ ಸಹಿ ಮಾಡಿರುವ ಸಿಬ್ಬಂದಿವರುಗಳ ವಿವರಗಳ ಹಾಗೂ ಇವರುಗಳ ವಿರುದ್ಧ ಜರುಗಿಸುವ ಕ್ರಮದ ಬಗ್ಗೆ ಮಾಹಿತಿಯನ್ನು ಮಾನ್ಯ ಶಿಕ್ಷಣ ಸಚಿವರಿಂದ ಕೋರಿದೆ.

**ಉತ್ತರ**

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ನೊಂದ ನೌಕರರು ಡಿ.ಎಸ್.ಇ.ಆರ್.ಟಿ.ಯ ಒಟ್ಟು 24 ಮಂದಿ ನೌಕರರುಗಳು ಶ್ರೀ ಚಿಕ್ಕರಾಮೇಗೌಡ, ಪ್ರಥಮ ದರ್ಜೆ ಸಹಾಯಕರು ಇವರು ಕಛೇರಿಯ ಅಧಿಕಾರಿ/ಸಿಬ್ಬಂದಿಯವರಿಗೆ ಕಿರುಕುಳ ನೀಡುತ್ತಿರುವುದಾಗಿ ದೂರು ದಿನಾಂಕ:13.01.2020 ರಂದು ಅರ್ಜಿ ಸಲ್ಲಿಕೆಯಾಗಿರುತ್ತದೆ.

ದೂರಿನ ಅರ್ಜಿಯಲ್ಲಿನ ಸತ್ಯಾಸತ್ಯತೆ ಬಗ್ಗೆ ಹಾಗೂ ಇವರು ನಿರ್ವಹಿಸಿರುವ ಕಡತಗಳ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ್ದು, ಹೊರಗುತ್ತಿಗೆ ಏಜೆನ್ಸಿ ನೇಮಕ ಸಂಬಂಧ ನಿರ್ವಹಿಸಿರುವ ಕಡತಗಳನ್ನು ನೇರವಾಗಿ ಮಂಡಿಸಿ ಪ್ರಕ್ರಿಯೆ ಲೋಪ ಎಸಗಿರುವ ಸಂಬಂಧ ಆಯುಕ್ತಾಲಯದ ವೈ.ಸಿ. ರವಿಕುಮಾರ್, ಹಿರಿಯ ಸಹಾಯಕ ನಿರ್ದೇಶಕರು, ಇವರ ನೇತೃತ್ವದಲ್ಲಿ ತನಿಖೆ ನಡೆಸಿದ್ದು ತನಿಖಾಧಿಕಾರಿಗಳು ದಿನಾಂಕ:01.07.2020ರಂದು ಪ್ರಾಥಮಿಕ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ವಿಚಾರಣಾಧಿಕಾರಿಗಳು ಕಛೇರಿಯ 19 ನೌಕರರುಗಳ ವಿರುದ್ಧ ಆರೋಪ ಮಾಡಿ ನೀಡಿರುವ ದೂರಿನಲ್ಲಿ

. . . . . . 2

ಮಹಿಳಾ ಗ್ರೂಪ್-ಡಿ ಸಿಬ್ಬಂದಿ, ಇತರೆ ಕಛೇರಿ ಸಿಬ್ಬಂದಿಯವರು ವಿವಿಧ ಸನ್ನಿವೇಶಗಳಲ್ಲಿ ಅನುಭವಿಸಿದ ತೊಂದರೆಗಳ ಕುರಿತಾಗಿ ಹೇಳಿಕೆಯನ್ನು ನೀಡಿದ್ದು, ನೀಡಿರುವ ಹೇಳಿಕೆಗಳು/ಸಾಕ್ಷಿಗಳ ಹೇಳಿಕೆ ಇವುಗಳಿಂದ ಶ್ರೀ ಎಂ.ಆರ್.ಚಿಕ್ಕರಾಮೇಗೌಡ ಇವರಿಂದ ದೂರುದಾರ ಸಿಬ್ಬಂದಿಗಳಿಗೆ ತೊಂದರೆಯಾಗಿರುವುದೆಂದು ತನಿಖಾಧಿಕಾರಿಗಳ ತನಿಖಾ ವರದಿಯಲ್ಲಿನ ಅಭಿಪ್ರಾಯವನ್ನು ಆಧರಿಸಿ, ಶ್ರೀ ಎಂ.ಆರ್. ಚಿಕ್ಕರಾಮೇಗೌಡ, ಪ್ರಥಮ ದರ್ಜೆ ಸಹಾಯಕರು ಇವರಿಗೆ ದಿನಾಂಕ:15.9.2020 ರಂದು ಆರೋಪ ಪಟ್ಟಿಯನ್ನು ಜಾರಿ ಮಾಡಿದ್ದು, ಆರೋಪಿತ ನೌಕರರು ದಿನಾಂಕ:18.11.2020 ರಂದು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಯಲ್ಲಿ ತುರ್ತಾಗಿ ನಿಗದಿತ ಅವಧಿಯಲ್ಲಿ ಕೆಲಸ ನಿರ್ವಹಿಸಬೇಕಾದ ಕಾರ್ಯಕ್ರಮವಾಗಿದ್ದರಿಂದ ಮೇಲಾಧಿಕಾರಿಗಳು ಮೌಖಿಕವಾಗಿ ಸೂಚಿಸಿದಂತೆ ಮತ್ತು ಕೆಲಸದ ಒತ್ತಡದಿಂದ ಕೆಲಸ ನಿರ್ವಹಿಸಿರುವ ಕಾರಣ ಮತ್ತು ಕಾಲಾವಕಾಶ ಕಡಿಮೆ ಇದ್ದ ಕಾರಣ ಕಛೇರಿ ಕಾರ್ಯವಿಧಾನದಡಿಯಲ್ಲಿ ಕಡತಗಳನ್ನು ನಿರ್ವಹಿಸಲು ಸಾಧ್ಯವಾಗದ ಕಾರಣ ಇವರ ಮೇಲಿನ ಆರೋಪಗಳನ್ನು ಮನ್ನಿಸಿ ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

ಮುಂದುವರೆದು, ಸದರಿ ನೌಕರರ ದುರ್ನಡತೆಯ ಕುರಿತು ಸತ್ಯಾಸತ್ಯತೆಯನ್ನು ಅರಿಯುವ ಸಂಬಂಧ ಅಧ್ಯಕ್ಷರು, ಆಂತರಿಕ ದೂರು ಸಮಿತಿ ಹಾಗೂ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರನ್ನು ಸದರಿ ಪ್ರಕರಣದಲ್ಲಿ ವಿಚಾರಣೆ ನಡೆಸಿ ವರದಿ ನೀಡುವಂತೆ ನೇಮಿಸಲಾಗಿ, ಸದರಿಯವರು ದಿನಾಂಕ:29.09.2020ರಂದು ಸಲ್ಲಿಸಿದ ವಿಚಾರಣಾ ವರದಿಯೊಂದಿಗೆ ದಿನಾಂಕ:27.01.2021ರಂದು 2ನೇ ಕಾರಣ ಕೇಳುವ ನೋಟೀಸ್ಸನ್ನು ಆರೋಪಿತ ನೌಕರರಿಗೆ ಜಾರಿಗೊಳಿಸಲಾಗಿದ್ದು, ಆರೋಪಿತ ನೌಕರರು ಸಲ್ಲಿಸಿರುವ ರಕ್ಷಣಾ ಹೇಳಿಕೆಯಲ್ಲಿ ಇವರ ಮೇಲಿನ ಆರೋಪಗಳನ್ನು ಮನ್ನಿಸಿ, ಸದರಿಯವರ ವಯೋನಿವೃತ್ತಿಗೆ 05 ತಿಂಗಳುಗಳು ಮಾತ್ರ ಸೇವೆ ಸಲ್ಲಿಸಲು ಬಾಕಿ ಇದ್ದು ಈ ಸೇವೆಯನ್ನು ನೆಮ್ಮದಿಯಿಂದ ಪೂರೈಸಲು ಅನಕೂಲ ಮಾಡಿಕೊಡಬೇಕೆಂದು ಕೋರಿದ ಹಿನ್ನೆಲೆಯಲ್ಲಿ ಹಾಗೂ ಈ ಸಂಬಂಧ ಸಲ್ಲಿಸಿರುವ ದಾಖಲೆಗಳು ಮತ್ತು ಪೂರಕ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಧಿಕೃತ ಜ್ಞಾಪನ ಸಂಖ್ಯೆ:ಸಿ5(6)ದೂರು/63/2019-20 ದಿನಾಂಕ:07.06.2021ರಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರಿ ಕರ್ತವ್ಯಗಳನ್ನು ಜವಾಬ್ದಾರಿಯುತವಾಗಿ ಅರಿತುಕೊಂಡು ಕರ್ತವ್ಯ ನಿರ್ವಹಿಸುವಂತೆ ಎಚ್ಚರಿಕೆ ನೀಡಿ ಪ್ರಕರಣವನ್ನು ಇತ್ಯರ್ಥಪಡಿಸಲಾಗಿದೆ.

ಸಂಖ್ಯೆ:ಇಡಿ 64 ಎಸ್ ಟಿ ಬಿ 2021

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು